**ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ**

ಸಿ. ಸಿ. ಸಂಖ್ಯೆಃ 1161/2024

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿತರು** |
|---|---|---|
| ಸರ್ಕಾರದ ಪರವಾಗಿ,<br>ಗ್ರಾಮಾಂತರ ಪೊಲೀಸ್ ಠಾಣೆ,<br>ಭದ್ರಾವತಿ | | ಶ್ರೀ ಎಂ.ಗೋಪಿ ಮತ್ತು ಇತರರು |

**:: ದೋಷಾರೋಪಣೆ ::**

**ಶ್ರೀ. ಟಿ. ಶ್ರೀಕಾಂತ್, ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಭದ್ರಾವತಿ, ಅದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀ ಎಂ. ಗೋಪಿ
ಬಿನ್ ಲೇಟ್ ಮೀಟ್ಯಾನಾಯ್ಕ,
ವಯಸ್ಸು 32 ವರ್ಷ,
ವಾಸಃ ನೆಲ್ಲಿಸರ ಗ್ರಾಮ,
ಭದ್ರಾವತಿ ತಾಲ್ಲೂಕು.

2. ಕುಮಾರಿ ಎಂ. ಕಾವ್ಯ ಯಾನೆ ಕಾವ್ಯಬಾಯಿ
ಬಿನ್ ಲೇಟ್ ಮೀಟ್ಯಾನಾಯ್ಕ,
ವಯಸ್ಸು 30 ವರ್ಷ,
ವಾಸಃ ನೆಲ್ಲಿಸರ ಗ್ರಾಮ,
ಭದ್ರಾವತಿ ತಾಲ್ಲೂಕು.

3. ಶ್ರೀ ಕೆ.ಯುವರಾಜ್ ಯಾನೆ ಯುವರಾಜ್ ನಾಯ್ಕ
ಬಿನ್ ಕಂಠ್ಯನಾಯ್ಕ,
ವಯಸ್ಸು 29 ವರ್ಷ,

ವಾಸಃ ನೆಲ್ಲಿಸರ ಗ್ರಾಮ,
ಭದ್ರಾವತಿ ತಾಲ್ಲೂಕು.

**ಈ ಕೆಳಗಿನಂತೆ ದೋಷಾರೋಪಣೆ ಹೊರಸಿದ್ದೇನೆಃ-**

ಮೊದಲನೆಯದಾಗಿ, ದಿನಾಂಕಃ27/03/2024 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಭದ್ರಾವತಿ ತಾಲ್ಲೂಕು, ನೆಲ್ಲಿಸರ ಗ್ರಾಮದಲ್ಲಿರುವ ಸೀತಾಬಾಯಿರವರ ವಾಸದ ಮನೆಯ ಮುಂದೆ ಇರುವ ಚರಂಡಿ ಪಕ್ಕದಲ್ಲಿ ನೀರಿನ ವಿಚಾರವಾಗಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಸಾಕ್ಷಿ-1 ರವರೊಂದಿಗೆ ಜಗಳ ತೆಗೆದು, ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಸಾರ್ವಜನಿಕ ನೆಮ್ಮದಿಗೆ ಭಂಗವನ್ನುಂಟು ಮಾಡಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 504 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಸಾಕ್ಷಿ-1 ರಿಂದ 3 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 323 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 3 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 1 ನೇ ಆರೋಪಿಯು ಕಬ್ಬಿಣದ ನೀರಿನ ಪೈಪಿನಿಂದ ಸಾಕ್ಷಿ-1 ರವರ ಎಡಗೈ ಮುಂಗೈ ಹತ್ತಿರ ಹೊಡೆದಿದ್ದು ಹಾಗೂ 3 ನೇ ಆರೋಪಿಯು ಕಲ್ಲಿನಿಂದ ಸಾಕ್ಷಿ-3 ರವರ ಎಡಗಾಲಿಗೆ ಹೊಡೆದು ನೋವುಂಟು ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 324 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ನಾಲ್ಕನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಸಾಕ್ಷಿ-1 ರವರನ್ನು ಹಿಡಿದು ಎಳೆದಾಡಿ

ಅವರ ಮಾನಕ್ಕೆ ಕುಂದುಂಟು ಮಾಡಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 354 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸಾಕ್ಷಿ-1 ರಿಂದ 3 ರವರಿಗೆ ಜೀವ ಭಯ ಉಂಟು ಮಾಡುವ ಉದ್ದೇಶದಿಂದ, ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 506 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲಿನ ಆರೋಪಕ್ಕೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರಶ್ನೆ.1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು ನಿಮಗೆ ಅರ್ಥವಾಗಿದೆಯೇ?

ಉತ್ತರ: ಆ 1) ಆ 2) ಆ 3)

ಪ್ರಶ್ನೆ.2: ನೀವು ಆರೋಪಗಳನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತಿರೋ.?

ಉತ್ತರ: ಆ 1) ಆ 2) ಆ 3)

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ, ತಿಳಿಸಿ ಹೇಳಿದ ನಂತರ ಆತ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕ:

(ಟಿ.ಶ್ರೀಕಾಂತ್)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು ಭದ್ರಾವತಿ.